



ಅರುಣ ಪಿ. ಭಟ್ಟ

# ವಾರಭವಿಷ್ಯ 28.5.2020ರಿಂದ 3.6.2020ರವರೆಗೆ




ವಾರದ ಆರಂಭದಿಂದಲೇ ಹಲವು ವ್ಯವಹಾರಗಳಲ್ಲಿ ಯಶಸ್ಸು ದೊರೆಯಲಿದೆ. ಕಾನೂನು ವ್ಯಾಜ್ಯಗಳಿದ್ದಲ್ಲಿ ಅದನ್ನು ನಿವಾರಿಸಿಕೊಳ್ಳಲು ವೇದಿಕೆ ದೊರೆಯಲಿದೆ. ವೃತ್ತಿ ಕಾರಣಕ್ಕೆ ಪ್ರಯಾಣ ಮಾಡಬೇಕಾದ ಸಂದರ್ಭ ಬರಬಹುದು. ವಾರದ ದ್ವಿತೀಯಾರ್ಧದಲ್ಲಿ ಸರ್ಕಾರಿ ಹಾಗೂ ಖಾಸಗಿ ಕೆಲಸ ಕಾರ್ಯಗಳಲ್ಲಿ ಪ್ರಗತಿ ಇದೆ. ಪ್ರೀತಿ ಪಾತ್ರರ ಜತೆಗೆ ಬಾಂಧವ್ಯ ಮತ್ತಷ್ಟು ಗಟ್ಟಿಯಾಗಲಿದೆ. ಶುಭದಿನ 2. ಸೌಂದರ್ಯ ಲಹರಿ ಪಠಿಸಿರಿ.




ವಾರದ ಶುರುವಿನಲ್ಲಿ ವೈವಾಹಿಕ ಜೀವನ ಸಂತೋಷವಾಗಿರುತ್ತದೆ. ಸಂಗಾತಿ ಜತೆಗೆ ಮಧುರ ಬಾಂಧವ್ಯ ಇರುತ್ತದೆ. ನೀವು ಕೆಲಸ ಮಾಡುವ ವ್ಯವಹಾರಗಳನ್ನು ಮುನ್ನಡೆಸುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸಲಿದ್ದೀರಿ. ಪ್ರೀತಿಪಾತ್ರರ ಜತೆ ಬಾಂಧವ್ಯ ಗಟ್ಟಿಯಾಗಲಿದೆ. ವಾರದ ಮೊದಲ ಭಾಗದಲ್ಲಿ ಆರೋಗ್ಯ ಉತ್ತಮವಾಗಿರುತ್ತದೆ. ಶುಭದಿನ 29. ಹನುಮಾನ್ ಚಾಲಿಸ್ ಪಠಿಸಿರಿ.




ವೃತ್ತಿರಂಗದಲ್ಲಿ ಹಲವು ಮಹತ್ತರವಾದ ಅವಕಾಶಗಳು ದೊರೆಯಲಿವೆ. ವಾರದ ಮೊದಲ ಭಾಗದಲ್ಲಿ ಆದಾಯವು ಸಮಾಧಾನಕರ ಮಟ್ಟಕ್ಕೆ ಏರಿಕೆ ಆಗಲಿದೆ. ಆರೋಗ್ಯ ಉತ್ತಮವಾಗಿರಲಿದೆ. ವಾರದ ದ್ವಿತೀಯಾರ್ಧದಲ್ಲಿ ಪ್ರೀತಿಪಾತ್ರರ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಈ ಹಿಂದಿನ ಕೌಟುಂಬಿಕ ಸಮಸ್ಯೆಗಳನ್ನು ತಾಳ್ಮೆಯಿಂದ ಬಗೆಹರಿಸಿಕೊಳ್ಳಲಿದ್ದೀರಿ. ಶುಭದಿನ 30. ಚಂಡಿ ಪಾರಾಯಣ ಮಾಡಿರಿ.




ಸೇವಾ ವಲಯ ಹಾಗೂ ವ್ಯಾಪಾರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರು ಅತ್ಯುತ್ತಮ ಫಲಿತಾಂಶ ಪಡೆಯಲಿದ್ದಾರೆ. ಕಚೇರಿಯಲ್ಲಿ ಬದಲಾವಣೆ ತರುವುದಕ್ಕೆ ಹಣ ಖರ್ಚು ಮಾಡಲಿದ್ದೀರಿ. ಆರೋಗ್ಯ ಮತ್ತು ದೈಹಿಕ ದೃಢತೆ ಚೆನ್ನಾಗಿರಲಿದೆ. ವೃತ್ತಿಪರ ಕೌಶಲವನ್ನು ಹೆಚ್ಚಿಸಿಕೊಳ್ಳಲು ಅವಕಾಶ ದೊರೆಯಲಿದೆ. ದೂರ ಪ್ರಯಾಣ ಮಾಡಬೇಕಾದ ಪರಿಸ್ಥಿತಿ ಬರಲಿದೆ. ಶುಭದಿನ 31. ಶ್ರೀರಾಮ ಸ್ತೋತ್ರ ಪಠಿಸಿರಿ.




ಆರೋಗ್ಯ ಉತ್ತಮವಾಗಿ ಇರಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಆರಂಭಿಸಲಿದ್ದೀರಿ. ಹಲವು ಸಕಾರಾತ್ಮಕ ಬದಲಾವಣೆಗೆ ಸಾಕ್ಷಿ ಆಗಲಿದ್ದೀರಿ. ಧರ್ಮ ಕಾರ್ಯಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ವಾರದ ದ್ವಿತೀಯಾರ್ಧದಲ್ಲಿ ಮನೆಗೆ ಅಗತ್ಯ ಇರುವ ವಸ್ತುಗಳನ್ನು ಖರೀದಿ ಮಾಡುವ ಸಾಧ್ಯತೆಗಳಿವೆ. ಉದ್ಯೋಗಕ್ಕಾಗಿ ಹುಡುಕಾಟ ನಡೆಸುತ್ತೀರಿ. ಶುಭದಿನ 25. ಗಣಪತಿಸುಬ್ರಮಣ್ಯ ಜಪ ಮಾಡಿರಿ.




ವಾರದ ಶುರುವಿನಿಂದಲೇ ಸಂಬಂಧಿಗಳೊಂದಿಗೆ ಬಾಂಧವ್ಯ ಗಟ್ಟಿಯಾಗಲಿದೆ. ಕುಟುಂಬದಲ್ಲಿ ಸಂತಸದ ವಾತಾವರಣ ಇರಲಿದೆ. ಹಣಕಾಸು ಹೂಡಿಕೆಗೆ ಈ ವಾರ ಲಾಭದಾಯಕ. ಆದರೆ ಆರೋಗ್ಯಕ್ಕೆ ಸಂಬಂಧಿಸಿದಂತೆ ಕೆಲ ಸಮಸ್ಯೆ ಕಾಣಿಸಿಕೊಳ್ಳಬಹುದು. ವಿದೇಶ ವ್ಯವಹಾರಗಳಲ್ಲಿ ದೊಡ್ಡ ಮಟ್ಟದ ಲಾಭ ದೊರೆಯುವ ಅವಕಾಶಗಳಿವೆ. ಶುಭದಿನ 2. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ವೈವಾಹಿಕ ಜೀವನ ಸಂತುಷ್ಟವಾಗಿರುತ್ತದೆ. ಕೌಟುಂಬಿಕ ಸಂಗತಿಗಳಿಗೆ ಪ್ರಾಮುಖ್ಯವಿರುತ್ತದೆ. ಸಂಗಾತಿ ಮಕ್ಕಳ ಜತೆಗೆ ಉತ್ತಮ ಬಾಂಧವ್ಯ ಇರುತ್ತದೆ. ವ್ಯಾಪಾರ ಉದ್ಯಮ ವಿಸ್ತರಣೆಗೆ ಕೈಗೊಂಡ ಪ್ರಯತ್ನಗಳಲ್ಲಿ ಯಶಸ್ವಿ ಆಗಲಿದ್ದೀರಿ. ಆರೋಗ್ಯ ಉತ್ತಮವಾಗಿರುತ್ತದೆ. ಈ ಹಿಂದಿನ ಆರೋಗ್ಯ ಸಮಸ್ಯೆಗಳು ಇದ್ದಲ್ಲಿ ನಿವಾರಣೆ ಆಗಲಿದೆ. ಶುಭದಿನ 29. ಮಹಾಗಣಪತಿಗೆ ದೂರ್ವಾರ್ಚನೆ ಮಾಡಿರಿ.




ವಿದೇಶಿ ವ್ಯವಹಾರಗಳಲ್ಲಿ ದೊಡ್ಡ ಯಶಸ್ಸು ಪಡೆಯುವಂಥ ಅವಕಾಶಗಳಿವೆ. ವಿದೇಶಗಳಲ್ಲಿ ಕಾರ್ಯ ನಿರ್ವಹಿಸಲು ಬಯಸಿದವರಿಗೆ ಶುಭ ವಾರ್ತೆ. ಆರ್ಥಿಕ ಹೂಡಿಕೆಗಳಿಗೆ ಉತ್ತಮ ಫಲಿತಾಂಶ ದೊರೆಯಲಿದೆ. ನಿಮ್ಮ ಪ್ರತಿಸ್ಪರ್ಧಿಗಳ ವಿರುದ್ಧ ಕೈ ಮೇಲಾಗಲಿದೆ. ಆದರೆ ಆರೋಗ್ಯ ಮತ್ತು ಪ್ರೀತಿ ಪ್ರೇಮದ ವಿಚಾರದಲ್ಲಿ ಏರಿಳಿತಗಳನ್ನು ಕಾಣಲಿದ್ದೀರಿ. ಶುಭದಿನ 2. ಚಂಡಿ ಪಾರಾಯಣ ಮಾಡಿರಿ.




ಕೌಟುಂಬಿಕ ಜೀವನ ಚೆನ್ನಾಗಿ ಇರಬೇಕು ಎಂಬ ಕಾರಣಕ್ಕೆ ನೀವು ಹೆಚ್ಚು ಶ್ರಮ ಹಾಕಲಿದ್ದೀರಿ. ಆರ್ಥಿಕ ಸ್ಥಿತಿ ಉತ್ತಮವಾಗಿ ಇರಲಿದೆ. ಹೆಚ್ಚುವರಿ ಆದಾಯ ಮೂಲದ ಮೂಲಕ ನಿಮ್ಮ ಗಳಿಕೆ ಹೆಚ್ಚಳವಾಗಲಿದೆ. ಸಂಗಾತಿ ಜತೆಗಿನ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿದೆ. ವಿದೇಶಿ ಹೂಡಿಕೆ ಹಾಗೂ ವ್ಯವಹಾರಗಳು ಇದ್ದಲ್ಲಿ ಏಳ್ಗೆ ಕಾಣಿಸುವ ಸೂಚನೆ ದೊರೆಯುತ್ತದೆ. ಶುಭದಿನ 28. ರಾಘವೇಂದ್ರ ಸ್ವಾಮಿಗಳ ಭಜನೆ ಮಾಡಿರಿ.




ಆರೋಗ್ಯ ಸಮಸ್ಯೆಗಳು ನಿವಾರಣೆ ಆಗುತ್ತವೆ. ವೃತ್ತಿ ಬದುಕಿನ ನಿಮ್ಮ ಅನುಭವವನ್ನು ಸಹೋದ್ಯೋಗಿಗಳು ಮನಸಾರೆ ಹೊಗಳಲಿದ್ದಾರೆ. ವಾರದ ದ್ವಿತೀಯಾರ್ಧದಲ್ಲಿ ಆರ್ಥಿಕ ಸ್ಥಿತಿ ಉತ್ತಮವಾಗಿರುತ್ತದೆ. ಜೀವನಶೈಲಿಯಲ್ಲಿ ಸಕಾರಾತ್ಮಕವಾದ ಬದಲಾವಣೆ ಕಾಣಲಿದ್ದೀರಿ. ಸಂಪತ್ತು ಮತ್ತು ಹಣ ಸಂಗ್ರಹಕ್ಕಾಗಿ ನೀವು ಹಾಕಿದ ಪ್ರಯತ್ನ ಫಲಿತಾಂಶ ನೀಡಲು ಆರಂಭಿಸುತ್ತದೆ. ಶುಭದಿನ 30. ಶಿವನನ್ನು ಆರಾಧಿಸಿ.




ಈ ವಾರ ಒಂದಿಲ್ಲೊಂದು ಕ್ರಿಯೇಟಿವ್ ಕೆಲಸದಲ್ಲಿ ತೊಡಗಿಕೊಳ್ಳಲಿದ್ದೀರಿ. ಸಣ್ಣ ಪ್ರವಾಸವಾದರೂ ಲಾಭದಾಯಕ ಆಗುವಂಥ ಪ್ರಯಾಣವೊಂದನ್ನು ಕೈಗೊಳ್ಳಲಿದ್ದೀರಿ. ಬಹಳ ಖ್ಯಾತರಾದ ವ್ಯಕ್ತಿಯನ್ನು ಭೇಟಿ ಆಗುವ ಸಾಧ್ಯತೆ ಇದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ಸಹೋದ್ಯೋಗಿಗಳಿಗೆ ಪ್ರೋತ್ಸಾಹ ನೀಡಲಿದ್ದೀರಿ. ಶುಭದಿನ 30. ವಿಷ್ಣು ಸಹಸ್ರನಾಮ ಓದಿರಿ.




ವಾರದ ಶುರುವಿನಿಂದಲೇ ಅಂದುಕೊಂಡ ಫಲಿತಾಂಶ ನಿಮಗೆ ದೊರೆಯಲಿದೆ. ಹಣಕಾಸು ಹೂಡಿಕೆಯಿಂದ ಉತ್ತಮ ಲಾಭವಾಗಲಿದೆ. ಈ ವಾರ ದೂರದ ಪ್ರದೇಶಗಳಿಗೆ ಪ್ರಯಾಣ ಮಾಡಬೇಕಾದ ಅನಿವಾರ್ಯ ಸೃಷ್ಟಿಯಾಗಬಹುದು. ಕೆಲವು ಅನಾರೋಗ್ಯ ಸಮಸ್ಯೆಗಳು ಕಾಡಬಹುದು. ಋತುಮಾನಕ್ಕೆ ತಕ್ಕ ಆರೋಗ್ಯ ಸಮಸ್ಯೆಗಳು ಎದುರಾಗಬಹುದು. ಶುಭದಿನ 1. ಶಿವಕವಚ ಪಠಿಸಿರಿ.